CC-O. In Public Domain. Digitized by eGangotri

ಮಕ್ಕಳ ಮಾರಕ ರೋಗಗಳು

ಆರ್. ಹೆಚ್. ಎಂ. ಸಿದ್ದಲಿಂಗಯ್ಯ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳ ಮಾರಕ ರೋಗಗಳು

ಆರ್. ಹೆಚ್. ಎಂ. ಸಿದ್ಧಲಿಂಗಯ್ಯ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

ಮೊದಲನೆ ಮುದ್ರಣ ೧೯೭೭, ೨೦೦೦ ಪ್ರತಿಗಳು
CC-0. In Public Domain. Digitized by eGangotri
ತಿದ್ದಿದ ಎರಡನೆ ಮುದ್ರಣ ೧೯೮೦, ೫೦೦೦ ಪ್ರತಿಗಳು
ಮೂರನೆ ಮುದ್ರಣ ೧೯೮೪, ೧೦೦೦೦ ಪ್ರತಿಗಳು

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಮಾತು

ಹೊಸದಾಗಿ ಅಕ್ಷರ ಕಲಿತ ಮತ್ತು ಪ್ರಾಥಮಿಕ ಶಾಲೆಯಲ್ಲಿ ಓದಿ ಮುಂದೆ ಓದಲಾಗದ ವಯಸ್ಕರಿಗೆ ಸರಳವಾದ, ಉಪಯುಕ್ತವಾದ ಸಾಹಿತ್ಯವನ್ನು ಒದಗಿಸುವುದು ವಯಸ್ಕರ ಶಿಕ್ಷಣ ರಂಗದಲ್ಲಿ ಬಹು ಮುಖ್ಯವಾದ ಕೆಲಸ. ಸಾಕ್ಷರತೆ ಜ್ಞಾನಾರ್ಜನೆಗೆ ಒಂದು ಸಾಧನವೇ ಹೊರತು ಅದೇ ಗುರಿಯಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದ ಸಾಕ್ಷರತೆ ಓದುಗನ ನಿತ್ಯಜೀವನದ ಕೈದೀವಿಗೆ ಆಗಬೇಕು. ಇದಕ್ಕಾಗಿ ವಿಶ್ವದಾದ್ಯಂತ ಯುನೆಸ್ಕೊ ಸಂಸ್ಥೆ ಕ್ರಿಯಾತ್ಮಕ ಸಾಕ್ಷರತಾ ಪ್ರಚಾರ ಯೋಜನೆಯನ್ನು ಕೈಗೊಂಡಿದೆ. ಅದರಲ್ಲಿ ಭಾರತವೂ ತನ್ನ ಕೈಲಾದ ಸೇವೆಯನ್ನು ಸಲ್ಲಿಸುತ್ತಿದೆ.

ಸಾಹಿತ್ಯವನ್ನು ರಚಿಸುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಅನುಭವಸ್ಥ ಲೇಖಕರಿಗೂ ಈ ರಂಗದಲ್ಲಿ ಶಿಕ್ಷಣ ಅಗತ್ಯ. ಇದನ್ನು ಗಮನಿಸಿ ಸರಕಾರಗಳು, ವಯಸ್ಕರ ಶಿಕ್ಷಣ ಸಂಸ್ಥೆಗಳು ಲೇಖಕರಿಗೆ ತರಬೇತು ನೀಡುವ ಸಾಹಿತ್ಯ ರಚನಾಲಯಗಳನ್ನು ಏರ್ಪಡಿಸುತ್ತಿವೆ. ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ಏಳು ಸಾಹಿತ್ಯ ರಚನಾಲಯಗಳು ನಡೆದಿವೆ. ಆ ರಚನಾಲಯಗಳಲ್ಲಿ ಉಪಯುಕ್ತವಾದ ಅನೇಕ ಪುಸ್ತಕಗಳು ರಚಿತವಾಗಿವೆ. ಅವುಗಳನ್ನು ಪ್ರಕಟಿಸಲಾಗಿದೆ.

ರಚನಾಲಯದಲ್ಲಿ ಭಾಗವಹಿಸಿ ತರಪೇತು ಪಡೆದ ಶ್ರೀ ಆರ್. ಹೆಚ್. ಎಂ. ಸಿದ್ಧಲಿಂಗಯ್ಯ ಅವರು "ಮಕ್ಕಳ ಮಾರಕ ರೋಗಗಳು" ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಅದನ್ನು ಈಗ ಪ್ರಕಟಿಸಲಾಗಿದೆ. ಓದುಗಾರಿಕೆಯಲ್ಲಿ ಹೆಚ್ಚು ಪಳಗದ ಮತ್ತು ಓದಿನಲ್ಲಿ ಆಸಕ್ತಿ ಇರುವ ಅಕ್ಷರಸ್ಥರಿಗೆ ಉಪಯುಕ್ತವಾದ ಮತ್ತು ಸ್ವಾರಸ್ಯವಾದ ವಿಷಯಗಳಿಂದ ಕೂಡಿದೆ. ಈ ಪುಸ್ತಕ ಓದುಗರಿಗೆ ಹೆಚ್ಚು ಉಪಯುಕ್ತವಾಗುವುದೆಂದು ಆಶಿಸುವ.

ಡಿ. ಕರಿಯಪ್ಪಗೌಡ
ಅಧ್ಯಕ್ಷ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು
೧೦-೮-೭೭

Sri Vidyabharathi Book Centre, Sringeri

CC-O. In Public Domain. Digitized by eGangotri

ತಿದ್ದಿದ ಎರಡನೆಯ ಮುದ್ರಣ

ಈ ಪುಸ್ತಕ ೧೯೭೧ನೆಯ ಸಾಲಿನಲ್ಲಿ ನಡೆದ ಸಾಹಿತ್ಯ ರಚನಾಲಯದಲ್ಲಿ ತಯಾರಾದದ್ದು.

ಮೈಸೂರು ಮೆಡಿಕಲ್ ಕಾಲೇಜು ಇ. ಎನ್. ಟಿ ಶಾಖೆಯ ಪ್ರಾಧ್ಯಾಪಕರಾದ ಡಾ|| (ಶ್ರೀಮತಿ) ಶಾಂತ ಅವರು, ರಾಜ್ಯ ಸಂಪನ್ಮೂಲ ಕೇಂದ್ರದ ಕೋರಿಕೆಯ ಮೇಲೆ ಈ ಪುಸ್ತಕವನ್ನು ಕಾಲೋಚಿತವಾಗಿ ಪರಿಷ್ಕರಿಸಿ ಕೊಟ್ಟಿದ್ದಾರೆ. ಅವರಿಗೆ ಕೃತಜ್ಞತೆಗಳು.

ಜೇ. ರಾ. ಪ್ರಭಾಕರ
ನಿರ್ದೇಶಕರು ಮತ್ತು ಅಧ್ಯಕ್ಷರು ರಾಜ್ಯ ಸಂಪನ್ಮೂಲ ಕೇಂದ್ರ,
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳ ಮಾರಕ ರೋಗಗಳು

ಸೋಮಲಾಪುರ ಸುಂದರ ಹಳ್ಳಿ. ಸುಮಾರು ಐನೂರು ಮನೆಗಳು ಇವೆ. ಊರ ಸುತ್ತಲೂ ಮಾವಿನ ತೋಪು. ಅಲ್ಲಲ್ಲಿ ತೆಂಗಿನ ಗಿಡಗಳು. ಸುತ್ತಲೂ ನೀರು ತುಂಬಿ ಹರಿಯುವ ಕಾಲುವೆ. ಊರು ನೋಡಲು ಬಲು ಅಂದ. ಆ ಸುತ್ತಿಗೆಲ್ಲಾ ಇದೇ ದೊಡ್ಡ ಗ್ರಾಮ. ಆದುದರಿಂದ ಸುತ್ತಿನ ನಾಲ್ಕು ಗ್ರಾಮಕ್ಕೆ ಗ್ರಾಮ ಪಂಚಾಯಿತಿ ಕೇಂದ್ರ ಆ ಊರು. ಇದು ಮಾದರಿ ಗ್ರಾಮ ಪಂಚಾಯಿತಿ ಎಂದು ಹೆಸರು ಪಡೆದಿತ್ತು.

ಸರಪಂಚ ಸಂಗಣ್ಣ ಹೆಚ್ಚು ತಿಳಿದವ. ನುರಿತ ರೈತ. ಯೋಗ್ಯ ಮುಂದಾಳು. ಜನರ ಸುಖ-ದುಃಖಗಳನ್ನು ಅರಿತವ. ಅವನಿಗೆ ಹಳ್ಳಿಯ ಮೇಲೆ ಅಭಿಮಾನ. ಜನರ ಮೇಲೆ ಆದರ. ಪ್ರತಿ ಸಭೆಯಲ್ಲೂ ಹಳ್ಳಿಗಳ ಜನರ ಆರೋಗ್ಯ, ವಿದ್ಯಾಭ್ಯಾಸ, ವ್ಯವಸಾಯ, ಸಹಕಾರ ಸಂಘ ಕುರಿತು ವಿಚಾರಿಸುವ. ಸದಸ್ಯರೂ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ತಮ್ಮ ಹಳ್ಳಿಯ ಕುಂದುಕೊರತೆಗಳನ್ನು ಮುಂದಿಡುವರು. ವಿಷಯ ಚರ್ಚಿಸುವರು. ಅಧಿಕಾರಿಗಳಿಗೆ ತಿಳಿಸುವುದು, ಸಲಹೆ ಪಡೆಯುವುದು, ಪ್ರತಿ ಸಭೆಯಲ್ಲೂ ಸಾಮಾನ್ಯ.

ಅಂದು ಎಂದಿನಂತೆ ಪಂಚಾಯಿತಿ ಸಭೆ ಸೇರಿತ್ತು. ಸದಸ್ಯರೆಲ್ಲಾ ಸಭೆಗೆ ಬಂದಿದ್ದರು. ಪಕ್ಕದ ಹಳ್ಳಿಯ ರಂಗಣ್ಣನೂ ಆ ಸಭೆಯ ಸದಸ್ಯ.

ಸರಪಂಚ ಸಂಗಣ್ಣನು "ನಿಮ್ಮ ಹಳ್ಳಿಯ ಸಮಾಚಾರ ವೇನು ? ರಂಗಣ್ಣ" ಎಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗಣ್ಣ—ನಮ್ಮ ಊರಲ್ಲಿ ಮಕ್ಕಳಿಗೆಲ್ಲಾ ಕೆಮ್ಮು. ಏನು ಮಾಡುವುದು ?

ಸರಪಂಚ—ಕೆಮ್ಮೇ ? ಎಂಥಾ ಕೆಮ್ಮು ?

ರಂಗಣ್ಣ—ಯಾವ ಕೆಮ್ಮೋ ಏನೋ! ಎಲ್ಲಾ ಮಕ್ಕಳಿಗೂ ಕೆಮ್ಮು. ಏನಾದರೂ ಉಪಾಯ ಮಾಡಬೇಕು.

ಸರಪಂಚ—ಮಾಡಲೇ ಬೇಕು.

ಸದಸ್ಯ ರಾಜಣ್ಣ—ಇದು ನಮ್ಮ ಹಳ್ಳಿಗೂ ಬರಬಹುದು. ಮುನ್ನೆಚ್ಚರಿಕೆ ಅಗತ್ಯ.

ಸರಪಂಚ—ಹಾಗಾದರೆ ಏನು ಮಾಡೋಣ ?

ಸದಸ್ಯರು—ಮಾಡುವುದೇನಿದೆ? ವೈದ್ಯರನ್ನು ಕರೆಸುವುದು, ಉಪಚಾರ ಪಡೆಯುವುದು.

ಸರಪಂಚ—ಹಾಗೇ ಆಗಲಿ. ಠರಾವು ಮಾಡೋಣ. ಕೂಡಲೇ ವೈದ್ಯರು ಬರುವಂತೆ ತಿಳಿಸೋಣ.

ರಾಜಣ್ಣ—ನಾನು ಪಟ್ಟಣಕ್ಕೆ ಹೋಗಬೇಕಾಗಿದೆ. ಹಾಗೇ ವೈದ್ಯರನ್ನು ಕರೆತರುವೆ. ಅವರಿಗೆ ಒಂದು ಪತ್ರವನ್ನು ಕೊಡಿ. ನಾಳೆ ಮುಂಜಾನೆ ಚಾವಡಿಗೆ ಬರುವಂತೆ ನೀವು ಊರಲ್ಲಿ ಎಲ್ಲರಿಗೂ ತಿಳಿಸಿ ಎಂದ.

ಸರಪಂಚ—ರಾಜಣ್ಣನಿಗೆ ಪತ್ರ ಕೊಟ್ಟನು. ವಿವರ ತಿಳಿಸಿದನು. ಜವಾನ ಮಾದನನ್ನು ಕರೆದು, "ಮಾದ, ನೀನು ಪಕ್ಕದ ಹಳ್ಳಿ, ನಮ್ಮ ಹಳ್ಳಿಯಲ್ಲಿ ಈ ರೀತಿ ಡಂಗುರ ಸಾರು."

Sri Vidyabharathi Book Centre, Sringeri

CC-O. In Public Domain. Digitized by eGangotri

"ಜನರು ತಮ್ಮ ಮಕ್ಕಳ ಸಂಗಡ ನಾಳೆ ಮುಂಜಾನೆ ೧೦ ಗಂಟೆಗೆ ಚಾವಡಿಗೆ ಬರಬೇಕು. ವೈದ್ಯರು ಬರುವರು, ಮಕ್ಕಳನ್ನು ಪರೀಕ್ಷಿಸಿ ಕೆಮ್ಮಿಗೆ ಔಷಧ ಕೊಡುವರು."

ಮಾದ ಹಾಗೆ ಆಗಲಿ ಬುದ್ಧೀ ಎಂದು ಹೊರಟ. ಎರಡು ಹಳ್ಳಿಗಳಲ್ಲೂ ಸುದ್ದಿ ಸಾರಿದ.



ಹಳ್ಳಿಯ ಜನರು ವೈದ್ಯರ ಬರುವಿಕೆಗಾಗಿ ಕಾಯುತ್ತಿರುವುದು

ಮುಂಜಾನೆ ಊರವರೂ ಪಕ್ಕದ ಹಳ್ಳಿಯ ಜನರೂ ಮಕ್ಕಳೊಂದಿಗೆ ಚಾವಡಿಗೆ ಬಂದರು. ಎಲ್ಲರ ಗಮನ ವೈದ್ಯರ ಕಡೆಗೆ.

ರಂಗಾಪುರಕ್ಕೆ ಸೋಮಲಾಪುರದಿಂದ ಎಂಟು ಮೈಲು. ಅಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಸೋಮಲಾಪುರ ಆ ಕೇಂದ್ರಕ್ಕೆ ಸೇರಿದ್ದು. ರಾಜಣ್ಣ ಅಲ್ಲಿನ ಕೇಂದ್ರಕ್ಕೆ ಹೋಗಿ ವೈದ್ಯರನ್ನು ಭೇಟಿ ಮಾಡಿ ಅವರಿಗೆ ಸರಪಂಚರ ಕಾಗದ ಕೊಟ್ಟ. ಅವರು ಎಲ್ಲ ವಿಷಯವನ್ನೂ ಕೇಳಿ ಮರುದಿನ ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಾಮಕ್ಕೆ ಬರುವುದಾಗಿ ತಿಳಿಸಿದರು. ಅದೇ ರೀತಿ ಮರುದಿನ ೯ ಗಂಟೆಗೆ ಹೊರಟರು. ರಾಜಣ್ಣನೂ ಅವರೊಡನೆ ಹೊರಟ.

ಬಿಳಿಯ ಕಾರು ಹತ್ತು ಗಂಟೆಗೆ ಸೋಮಲಾಪುರ ತಲುಪಿತು. ಜನರ ನೋಟ ಕಾರಿನ ಕಡೆಗೆ, ವೈದ್ಯರು, ಸದಸ್ಯ ರಾಜಣ್ಣ ಕಾರಿನಿಂದ ಇಳಿದು ನೇರವಾಗಿ ಚಾವಡಿಗೆ ನಡೆದರು. ಸರಪಂಚರು, ಸದಸ್ಯರು ವೈದ್ಯರನ್ನು ಸ್ವಾಗತಿಸಿದರು. ಸ್ವಲ್ಪ ಹೊತ್ತು ಆ ಗ್ರಾಮದ ಬಗ್ಗೆ ಮಾತುಕತೆ ಆಡಿದರು. ನಂತರ



ವೈದ್ಯರು ಮಕ್ಕಳಿಗೆ ಚುಚ್ಚುಮದ್ದು ಹಾಕುತ್ತಿರುವುದು

ವೈದ್ಯರು ನೆರೆದ ಜನರನ್ನೂ ಮಕ್ಕಳನ್ನು ಎತ್ತಿಕೊಂಡು ನಿಂತಿದ್ದ ತಾಯಂದಿರನ್ನೂ ನೋಡಿದರು. ಬಹಳ ಮಕ್ಕಳು ಕೆಮ್ಮು ತ್ತಿದ್ದವು. ಕೆಲವು ಅಳುತ್ತಿದ್ದವು. ಮತ್ತೆ ಕೆಲವು ಸೀನುತ್ತಿದ್ದವು. ವೈದ್ಯರು ಮಕ್ಕಳನ್ನು ದೂರ ದೂರ ಇಡಲು ತಿಳಿಸಿದರು. ಸರತಿ ಯಂತೆ ಬರಲು ತಿಳಿಸಿದರು. ಪ್ರತಿ ಮಗುವನ್ನು ಪರೀಕ್ಷಿಸಿ ಕೆಮ್ಮುತ್ತಿದ್ದ ಮಕ್ಕಳಿಗೆ ಚುಚ್ಚುಮದ್ದನ್ನು ಕೊಟ್ಟರು. ತಕ್ಕ ಚಿಕಿತ್ಸೆ ನೀಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಪಂಚ—ವೈದ್ಯರೇ, ಹಳ್ಳಿಯಲ್ಲಿ ಕೆಮ್ಮುವ ಮಕ್ಕಳ ಸಂಕಟ ಹೇಳತೀರದು. ನೋಡಿದರೆ ಸಂಕಟವಾಗುತ್ತದೆ. ಇದು ಒಂದೇಸಮನೆ ಹಳ್ಳಿಯಲ್ಲಿ ಹಬ್ಬಿದೆ. ಈ ರೋಗದ ಬಗ್ಗೆ ನಮಗೆ ದಯವಿಟ್ಟು ತಿಳುವಳಿಕೆ ಮಾಡಿಕೊಡಬೇಕು.

ನಾಯಿಕೆಮ್ಮು

ವೈದ್ಯರು—ಒಳ್ಳೆಯದು. ಎಲ್ಲರನ್ನೂ ಒಂದು ಕಡೆ ಸೇರಿಸಿ. ರೋಗದ ವಿಚಾರ ನಂತರ ತಿಳಿಸುವೆ.

ಸರಪಂಚರು ಜನರನ್ನು ಒಂದು ಕಡೆ ಸೇರಲು ತಿಳಿಸಿದರು. ಎಲ್ಲರೂ ಒಂದು ಕಡೆ ಸೇರಿದರು. ಎಲ್ಲರ ಗಮನ ವೈದ್ಯರ ಕಡೆಗೆ. ವೈದ್ಯರು ಅಲ್ಲಿಗೆ ಬಂದರು.

ವೈದ್ಯರು—ನಿಮ್ಮ ಏರ್ಪಾಟು ನೋಡಿ ನನಗೆ ಮೆಚ್ಚಿಗೆ ಆಯಿತು. ನಿಮ್ಮ ಕೇಳಿಕೆ ಒಳ್ಳೆಯದು. ಕೆಲವು ರೋಗಗಳ ಬಗ್ಗೆ ಸಾಮಾನ್ಯ ತಿಳುವಳಿಕೆ ಎಲ್ಲರಿಗೂ ಬೇಕು. ಈಗ ನಿಮ್ಮ ಮಕ್ಕಳಿಗೆ ಬಂದಿರುವ ಕೆಮ್ಮು ಸಾಮಾನ್ಯವಾದುದಲ್ಲ. ಇದು ಒಂದು ಅಂಟುರೋಗ. ಅಂದರೆ ಒಬ್ಬರಿಂದ ಒಬ್ಬರಿಗೆ ಹರಡುವ ರೋಗ. ೨ ರಿಂದ ೭ ವರ್ಷದ ಮಕ್ಕಳು ಸಾಮಾನ್ಯವಾಗಿ ಇದಕ್ಕೆ ತುತ್ತಾಗುವರು. ೬ ತಿಂಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಸಹಾ ಇದು ಕಾಡದೆ ಬಿಡದು. ಒಂದು ಸಾರಿ ಈ ರೋಗ ಬಂದಲ್ಲಿ ಪುನಃ ಬರುವುದು ಅಪರೂಪ. ಬಂದರೆ ಸಹಿಸುವುದು ಕಷ್ಟ. ಹೆಣ್ಣುಮಕ್ಕಳನ್ನು ಹೆಚ್ಚಾಗಿ ಕಾಡುವುದು ಇದರ ವಿಶೇಷ ಗುಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳಿಗೆ ಹಲ್ಲು ಬರುವಾಗ, ದಡಾರ ಸೋಂಕಿರುವಾಗ ಈ ರೋಗ ಬರುವುದು ಹೆಚ್ಚು. ಇದಕ್ಕೆ ನಾಯಿಕೆಮ್ಮು ಎಂದು ಹೆಸರು.



ನಾಯಿಕೆಮ್ಮಿನಿಂದ ಮಗು ನರಳುತ್ತಿರುವುದು

ಸಾಮಾನ್ಯ ರೈತರಲ್ಲಿ ರಾಜಣ್ಣ ಒಬ್ಬ ಪಂಚಾಯಿತಿಯ ಸದಸ್ಯ. ಎರಡು ಮಕ್ಕಳ ತಂದೆ. ಸಾಮಾನ್ಯ ಓದು ಬಲ್ಲವ. ಬಲು ಸರಳ ಜೀವಿ. ಜನಸೇವೆ ಮಾಡಲು ಆಸೆ. ರೋಗಗಳ ಬಗ್ಗೆ ತಿಳಿಯುವ ಕುತೂಹಲ. " ವೈದ್ಯರೇ, ಈ ರೋಗಕ್ಕೆ ಔಷಧಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಟ್ಟರೆ ಮಗು ಬೇಗ ಗುಣ ಹೊಂದುವುದು. ಮಗು ಹುಟ್ಟಿದ ಒಂದು ವರ್ಷದ ಒಳಗೆ ರೋಗ ನಿರೋಧಕ ಚುಚ್ಚುಮದ್ದನ್ನು ಕೊಡಿಸಬೇಕು. ಆಗ ಈ ಕಾಯಿಲೆ ಬರುವುದೇ ಇಲ್ಲ. ೬ ತಿಂಗಳ ಒಳಗೆ ಈ ಚುಚ್ಚುಮದ್ದುಗಳನ್ನು ತಿಂಗಳಿಗೆ ಒಂದರಂತೆ ಮೂರು ತಿಂಗಳು ಕೊಡಿಸಬೇಕು.

ಗಂಗಮ್ಮ ಚುರುಕು ಬುದ್ಧಿಯ ರೈತ ಮಹಿಳೆ. ಚೊಚ್ಚಲ ಮಗುವಿನ ತಾಯಿ. ಆದರೂ ಅನುಭವ ಹೆಚ್ಚು. ಮಾಡಿ ತಿಳಿದವಳು, ನೋಡಿ ಕಲಿತವಳು. ಹಳ್ಳಿಯಲ್ಲಿ ಎಲ್ಲರಿಗೂ ಬೇಕಾದವಳು. ಅವಳಿಗೂ ರೋಗದ ಬಗ್ಗೆ ತಿಳಿಯಲು ಆತುರ. "ಈ ರೋಗ ಹೇಗೆ ಹರಡುವುದು ?" ಎಂದು ಕೇಳಿದಳು.

ವೈದ್ಯರು—ಸರಿಯಾದ ಪ್ರಶ್ನೆ. ಇದನ್ನು ಮೊದಲು ತಿಳಿಯಬೇಕು. ರೋಗ ಬಂದ ಮಕ್ಕಳು ಕೆಮ್ಮುತ್ತವೆ. ಆಗ ಬಾಯಿಂದ ತುಂತುರು ಹನಿಗಳು ಹೊರ ಬರುವುವು. ಇವು ಗಾಳಿಯಲ್ಲಿ ಸೇರುತ್ತವೆ. ಆ ಗಾಳಿಯನ್ನು ಬೇರೆಯವರು ಸೇವಿಸುವುದರಿಂದ ಈ ರೋಗ ಬರುವುದು. ರೋಗಿಯ ಎಂಜಲು, ಕಫ, ಸಿಂಬಳ ಈ ರೋಗಾಣುಗಳಿಗೆ ಆಸರೆ. ಇವು ಕಣ್ಣಿಗೆ ಕಾಣಿಸುವುದಿಲ್ಲ. ಅಂತಹ ರೋಗಾಣುವಿನಿಂದ ಈ ರೋಗ ಹರಡುತ್ತದೆ.

ರಾಜಣ್ಣ—ಇವು ಕಣ್ಣಿಗೆ ಕಾಣಿಸುವುದಿಲ್ಲವೆ ? ಈ ರೋಗ ಹರಡುವುದು ಹೇಗೆ ?

ಇದು ಬಹಳ ಅಂಟುರೋಗ. ಈ ರೋಗ ಶುರುವಾದ ಎರಡು ವಾರದವರೆಗೆ ಬಹಳ ಸೋಂಕು ಇರುತ್ತದೆ. ಮೇಲಿಂದ ಮೇಲೆ ಕೆಮ್ಮು ಬರಲಿಕ್ಕೆ ಶುರು ಆದಾಗ ಸೋಂಕು ಕಮ್ಮಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗುವುದು. ಆದರೆ ಈ ಕಾಯಿಲೆಯ ರೋಗಾಣುಗಳನ್ನು ಕಾಯಿಲೆ ಶುರುವಾದ ಎಂಟು ವಾರದವರೆಗೆ ಗುರುತಿಸಬಹುದು.

ವೈದ್ಯರು—ರೋಗಾಣುಗಳನ್ನು ನೋಡಲು ಒಂದು ಯಂತ್ರವಿದೆ. ಇದರಲ್ಲಿ ಅಣುಜೀವಿಗಳು ಕಾಣುವುವು. ಈ ಯಂತ್ರಕ್ಕೆ "ಸೂಕ್ಷ್ಮದರ್ಶಕ ಯಂತ್ರ" ಎಂದು ಹೆಸರು. ಇದು ನಮ್ಮ ಆಸ್ಪತ್ರೆಯಲ್ಲಿದೆ. ನೀವು ಬಂದಾಗ ನೋಡಬಹುದು.

ಈ ರೋಗ ಮಕ್ಕಳಿಂದ ಮಕ್ಕಳಿಗೆ ಬೇಗ ಹರಡುವುದು. ರೋಗ ಬೆಳೆಯಲು ೭ ರಿಂದ ೧೫ ದಿನಗಳು ಸಾಕು. ಶಾಲಾ ಮಕ್ಕಳಲ್ಲಿ ಈ ರೋಗ ಬೇಗ ಹರಡುವ ಸಾಧ್ಯತೆ ಹೆಚ್ಚು.

ಬಾಳಿನಲ್ಲಿ ಸುಖ-ದುಃಖ ಕಂಡವಳು ಬಾಳಮ್ಮ. ನಾಲ್ಕು ಮಕ್ಕಳ ತಾಯಿ. ಮಕ್ಕಳ ಕಾಯಿಲೆ ಅವಳಿಗೆ ಹೊಸದೇನಲ್ಲ. ಆಗಾಗ ತನ್ನ ಮಕ್ಕಳಿಗೆ ಬಂದ ಕಾಯಿಲೆಯ ಅನುಭವವೇ ಅವಳಿಗಿತ್ತು. ಹಳ್ಳಿಯ ಮದ್ದಿನಿಂದ ಬೇಸತ್ತಿದ್ದಳು. ವೈದ್ಯರನ್ನು ಸಲಹೆ ಕೇಳಲು ಕಾತುರ ಅವಳಿಗೆ.

ಬಾಳಮ್ಮ—"ನಾಯಿಕೆಮ್ಮು" ಗುರುತಿಸುವುದು ಹೇಗೆ? ಎಂದು ಕೇಳಿದಳು.

ವೈದ್ಯರು—ಉತ್ತಮ ಪ್ರಶ್ನೆ. ಮೊದಲು ಇದು ಸಾಮಾನ್ಯ ನೆಗಡಿ, ಕೆಮ್ಮಲಿನಂತೆಯೇ ಇರುವುದು. ಈ ಹಂತದಲ್ಲಿ ಈ ರೋಗವನ್ನು ಗುರುತಿಸುವುದು ತುಂಬಾ ಕಷ್ಟ. ಆದರೆ ರೋಗ ಹೆಚ್ಚಾದಂತೆ ಕಣ್ಣುಗಳು ಕೆಂಪಾಗುವುವು. ಉಸಿರು ಕಟ್ಟುವುದು. ರಾತ್ರಿವೇಳೆ ಕೆಮ್ಮು ಹೆಚ್ಚುವುದು. ಬಾಯಿಂದ ಎಳೆಯುತ್ತಿರುವ ಎಂಜಲು ಸುರಿಯುವುದು. ಕೆಮ್ಮಿದ ಕೂಡಲೇ ವಾಂತಿ ಆಗುವುದು. ಬಾಯಿಂದ 'ಊಫ್' ಎಂಬ ಕೂಗು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊರಬೀಳುವುದು ಕೆಲವು ವೇಳೆ ಮೂಗಿನಿಂದ ರಕ್ತ ಸುರಿಯು ವುದು. ಕಿವಿಯಲ್ಲಿ ಸೋರುವುದು. ಎಳವೂ ಬರುವುದುಂಟು. ಆದರೆ ಅಪರೂಪ. ಈ ರೀತಿ ಒಂದೆರೆಡು ವಾರಗಳು ಮಾತ್ರ ಇರುವುದು. ದಿನಕ್ರಮೇಣ ಕಡಿಮೆ ಆಗುವುದು. ಇದನ್ನು "೩ ತಿಂಗಳ ಕೆಮ್ಮು" ಅಥವಾ "ಗಡುವಿನ ಕೆಮ್ಮು" ಎಂದೂ ಹೇಳುತ್ತಾರೆ.

ಗಂಗಮ್ಮ—ಕೆಮ್ಮು ಪೂರ್ತಿ ಗುಣ ಆಗಲು ಎಷ್ಟು ದಿನಗಳು ಬೇಕು?

ವೈದ್ಯರು—ಕೆಮ್ಮು ಪೂರ್ತಿ ಗುಣವಾಗಲು ಒಂದೂವರೆ ತಿಂಗಳಿಂದ ಮೂರು ತಿಂಗಳು ಬೇಕು.

ರಂಗಣ್ಣ— ಈ ಕಾಯಿಲೆ ದೊಡ್ಡವರಿಗೂ ಬರುವುದೇ ?

ವೈದ್ಯರು—ಇದು ಮಗುವಿನಿಂದ ಹಿಡಿದು ಮುದುಕರ ವರೆಗೆ ಯಾರನ್ನೂ ಬಿಟ್ಟಿಲ್ಲ.

೧ ಮೇಲಿಂದ ಮೇಲೆ ಬರುವ ಕೆಮ್ಮಲಿನಿಂದ ಎದೆ, ಹೊಟ್ಟೆ ಮತ್ತು ತಲೆಯಲ್ಲಿ ಒತ್ತಡ ಹೆಚ್ಚುವುದು ಹಾಗೂ ರಕ್ತಸ್ರಾವ ಉಂಟಾಗುವುದು. ರಕ್ತಸ್ರಾವವು ಮೆದುಳಿನಲ್ಲಿ ಆಗಬಹುದು. ಆದರೆ ಸಾಮಾನ್ಯವಾಗಿ ಮೂಗು ಮತ್ತು ಕಿವಿ ಯಿಂದ ಅಥವಾ ಕೆಲವೊಮ್ಮೆ ಕಣ್ಣಿನ ಕೂಡ್ಪರೆಯ ಕೆಳಭಾಗದಲ್ಲಿ ಅಥವಾ ಚರ್ಮದಡಿಯೂ ಆಗುತ್ತದೆ.

೨ ಪದೇ ಪದೇ ವಾಂತಿ ಆಗುವುದು. ಅದರಿಂದ ದೇಹಕ್ಕೆ ಸರಿಯಾದ ಆಹಾರ ಇಲ್ಲದೆ ಹೋಗುವುದು. ಮೈಯಲ್ಲಿ ನೀರಿನಂಶ ಕಮ್ಮಿ ಆಗುವುದು. ಈ ಸ್ಥಿತಿ ಎಳೆಯ ಮಕ್ಕಳಲ್ಲಿ ತುಂಬ ಅಪಾಯಕಾರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೩. ಕೆಮ್ಮು ಶುರುವಾದ ಐದು ದಿನಗಳಲ್ಲಿ ಜ್ವರ ಕಮ್ಮಿ ಆಗದಿದ್ದಲ್ಲಿ ಶ್ವಾಸಕೋಶಕ್ಕೆ ರೋಂಕು ತಗಲುವ ಸಂಭವ ಇದೆ.

೪ ಉಸಿರು ಕಟ್ಟಿದಾಗ ತಲೆಯೊಳಗೆ ರಕ್ತಸ್ರಾವ ಆಗುವುದು. ಅದರಿಂದ ಮೆದುಳಿಗೆ ಹಾನಿ ಹಾಗೂ ದೇಹದ ಎಲ್ಲಾ ಭಾಗದಲ್ಲೂ ಎಳೆತ ಬಂದು ಜೀವಕ್ಕೇ ಹಾನಿ ಉಂಟಾಗುವುದು. ಒಂದು ಪಕ್ಷ ಮಗು ಉಳಿದರೂ ಮುಂದೆ ಪಾರ್ಶ್ವವಾಯುವಿನಿಂದ ನರಳಬಹುದು.

ರಾಜಣ್ಣ—ಈ ರೋಗ ತಡೆಗಟ್ಟುವ ಬಗೆ ಹೇಗೆ?

ವೈದ್ಯರು—ರೋಗಬಂದ ಮಕ್ಕಳನ್ನು ಬೇರೆ ಮಕ್ಕಳ ಜೊತೆ ಸೇರಿಸಬಾರದು. ಮೂರು ವಾರದವರೆಗೆ ದೂರವಿಡಬೇಕು. ಊಟ ಹೆಚ್ಚು ಕೊಡಬಾರದು. ವಾಂತಿ ಇದ್ದಲ್ಲಿ ಸ್ವಲ್ಪ ಸ್ವಲ್ಪ ಊಟ ಕೊಡಬೇಕು. ಮಗುವಿನ ಬಳಕೆಯ ವಸ್ತುಗಳನ್ನು ಬೇರೆ ಇಡಬೇಕು. ಇತರರು ಉಪಯೋಗಿಸಬಾರದು. ಶಿಶುವಿಹಾರ ಮತ್ತು ಶಾಲೆಗಳಿಗೆ ಮಕ್ಕಳನ್ನು ಕಳಿಸಬಾರದು. ಮನೆಯಲ್ಲಿರುವ ಎಲ್ಲ ಮಕ್ಕಳಿಗೆ ಚುಚ್ಚುಮದ್ದು ಹಾಕಿಸಬೇಕು. ಕಾಯಿಲೆ ಬಂದ ಮೇಲೆ ಸಂಕಟ ಪಡುವುದಕ್ಕಿಂತ, ಬರದಿರುವಂತೆ ಮಾಡುವುದೇ ಒಳ್ಳೆಯದು. ಎಳೆಯ ಮಕ್ಕಳು ಅಥವಾ ತೀರ ಚಿಕ್ಕ ಮಕ್ಕಳನ್ನು ಆಸ್ಪತ್ರೆಗೆ ಸೇರಿಸುವುದು ಒಳ್ಳೆಯದು.

ಈಗ ನಿಮ್ಮ ಮಕ್ಕಳಿಗೆ ಕೊಟ್ಟಿರುವ ಚುಚ್ಚುಮದ್ದು ಮತ್ತು ಔಷಧಿಯಿಂದ ರೋಗ ಬೇಗ ಗುಣವಾಗುವುದು. ಈ ಚುಚುಮದ್ದು ಮಕ್ಕಳಿಗೆ ರೋಗ ಬರದಂತೆ ತಡೆಗಟ್ಟುವುದು. ನಾನು ಕೊಟ್ಟಿರುವ ಚುಚ್ಚುಮದ್ದಿಗೆ ಇನ್ನೆರಡು ಕಾಯಿಲೆಗಳನ್ನು ತಡೆಗಟ್ಟುವ ಶಕ್ತಿ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗಣ್ಣ— ಇನ್ನೆರಡು ಕಾಯಿಲೆ! ಎಂದಿರಿ, ಅವು ಯಾವುವು?

ವೈದ್ಯರು—ತಿಳಿಯಲು ಕುತೂಹಲ ಅಲ್ಲವೇ ನಿಮಗೆ? ಒಳ್ಳೆಯದು. ವೇಳೆ ಆಗಿದೆ. ಮುಂದಿನ ತಿಂಗಳು ಬರುವೆ. ಆಗ ನಿಮಗೆ ಆ ಕಾಯಿಲೆಗಳ ವಿಷಯ ತಿಳಿಸುವೆ.

ಸಭೆಯಲ್ಲಿದ್ದ ಜನ ಎದ್ದುನಿಂತು ವೈದ್ಯರಿಗೆ ವಂದಿಸಿದರು. ವೈದ್ಯರು ಮರು ವಂದನೆ ಸಲ್ಲಿಸುತ್ತಾ ಕಾರು ಹತ್ತಿದರು.

ಡಿಫ್ತೀರಿಯಾ (ಕಂಠರೋಗ)

ದಿನಗಳು ಉರುಳಿದವು. ತಿಂಗಳು ತುಂಬಿತು. ಮಾದನಿಗೆ ಹಿಂದಿನ ದಿನ ಸರಪಂಚರು ಹೇಳಿದ ಮಾತು ನೆನಪಾಯಿತು. ಬೆಳಿಗ್ಗೆ ಬೇಗ ಎದ್ದು ತಮಟೆ ತೆಗೆದುಕೊಂಡ.

“ಇಂದು ವೈದ್ಯರು ಬರುವರು. ಎಲ್ಲರೂ ಮಕ್ಕಳೊಂದಿಗೆ ೧೦ ಗಂಟೆಗೆ ಚಾವಡಿಗೆ ಬರಬೇಕು” ಎಂದು ಸಾರಿದ. ಜನರು ಅವನು ಸಾರಿದ ಸುದ್ದಿ ತಿಳಿದರು. ಎಲ್ಲರೂ ಚಾವಡಿಯ ಕಡೆಗೆ ನಡೆದರು.

ಸಮಯಕ್ಕೆ ಸರಿಯಾಗಿ ವೈದ್ಯರು ಬಂದರು. ಹಿಂದಿನಂತೆ ಎಲ್ಲ ಪಾಲಕರು ಸರತಿಯಂತೆ ನಿಂತಿದ್ದರು. ಸರಪಂಚರು ವೈದ್ಯರನ್ನು ಸ್ವಾಗತಿಸಿದರು. ವೈದ್ಯರು ಎಂದಿನಂತೆ ಒಬ್ಬರ ನಂತರ ಒಬ್ಬರು ಬರಲು ತಿಳಿಸಿದರು. ಪ್ರತಿ ಮಗುವನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆ ನೀಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಚುಚ್ಚುಮದ್ದು ನೀಡಿಕೆ ಮುಗಿಯಿತು. ಹಿಂದಿನಂತೆ ಎಲ್ಲರೂ ಒಂದು ಕಡೆ ಸೇರಿದರು. ಸಭೆ ಶಾಂತವಾಗಿತ್ತು. ವೈದ್ಯರು ಸಭೆಗೆ ಆಗಮಿಸಿದರು.

ಡಿಫ್ತೀರಿಯಾ ರೋಗದಿಂದ ನರಳುತ್ತಿರುವ ಮಗು

ನಾನು ಹಿಂದಿನ ತಿಂಗಳು ತಮಗೆ "ನಾಯಿಕೆಮ್ಮು" ಬಗ್ಗೆ ತಿಳಿಸಿದ್ದೆ, ಅಲ್ಲವೆ? ಎಂದರು.

ಕುಳಿತಿದ್ದ ಜನರು "ಹೌದು, ಹೌದು" ಎಂದು ತಲೆ ಅಲ್ಲಾಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ನಾನು "ಡಿಫ್ತೀರಿಯಾ" ಎಂಬ ಇನ್ನೊಂದು ರೋಗದ ವಿಷಯ ತಿಳಿಸುವೆ, ಎಂದು ಮುಂದುವರಿಸಿದರು. ಇದೂ ಸಹಾ ಒಂದು ರೋಗಾಣುವಿನಿಂದ ಹುಟ್ಟುವ ರೋಗ. ಈ ರೋಗಾಣುವಿಗೆ ಗಂಟಲಮಾರಿ ಎಂದು ಹೆಸರು. ಇದು ಉಗುಳಿನಿಂದ, ಗಾಳಿಯಿಂದ, ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ರಾಜಣ್ಣ—ವೈದ್ಯರೇ, ಈ ರೋಗ ಹೇಗೆ ಹರಡುತ್ತದೆ? ದಯವಿಟ್ಟು ವಿವರವಾಗಿ ಹೇಳಿರಿ.

ವೈದ್ಯರು—ಗಾಳಿ ಮತ್ತು ಧೂಳು ಈ ರೋಗಾಣುಗಳಿಗೆ ಆಸರೆ. ಬಟ್ಟೆ, ಪುಸ್ತಕ, ಹಲ್ಲಿನ ಕುಂಚಗಳಿಂದಲೂ ಈ ರೋಗ ಹರಡಬಹುದು. ಕೆಲವು ಕಡೆ ಆಗಾಗ ಹರಡುತ್ತದೆ. ಮತ್ತೆ ಕೆಲವು ಕಡೆ ಮನೆಮಾಡಿಕೊಂಡಿರುತ್ತದೆ. ದಡಾರ ಎದ್ದಾಗ ಕಾಡದೆ ಬಿಡದು. ಈ ರೋಗಾಣುಗಳು ಹಾಲಿನ ಮೂಲಕ ಬಹು ಸುಲಭವಾಗಿ ಹರಡುತ್ತವೆ.

ಈ ರೋಗಾಣುಗಳ ವಿಷ ಹೃದಯ, ಮಾಂಸಖಂಡ, ಮೂತ್ರಜನಕಾಂಗ ಮತ್ತು ನರದೆಳೆಗಳನ್ನೂ ಬಿಟ್ಟಿಲ್ಲ. ೨ ರಿಂದ ೧೦ ವರ್ಷದ ಮಕ್ಕಳು ಈ ರೋಗಕ್ಕೆ ಹೆಚ್ಚು ತುತ್ತಾಗುತ್ತಾರೆ. ೧೨ ವರ್ಷ ಮೀರಿದವರಿಗೆ ನಿರೋಧಕ ಶಕ್ತಿ ಇರುತ್ತದೆ. ಮಳೆ ಗಾಲದಲ್ಲಿ ಈ ರೋಗ ಹೆಚ್ಚು ಕಾಣಿಸಿಕೊಳ್ಳುತ್ತದೆ. ಕೆಲವು ಸಲ ಲಕ್ವ ಕಾಣಿಸಿಕೊಳ್ಳುವುದೂ ಉಂಟು. ಈ ರೋಗಾಣುಗಳು ಪ್ರಪಂಚದ ಯಾವ ಭಾಗವನ್ನೂ ಬಿಟ್ಟಿಲ್ಲ.

ಮೂಗಿನ ಒಳಗಡೆ ಪೊರೆ ಇರುವುದು. ಅಲ್ಲಿ ಕಾಣಿಸಿ ಕೊಂಡಲ್ಲಿ ಸಿಂಬಳದ ಜೊತೆಗೆ ರಕ್ತ, ಕೀವು ಸುರಿಯುವುದು: ಕೆಟ್ಟವಾಸನೆ ಇರುವುದು. ತಲೆನೋವು ಸಾಮಾನ್ಯ. ಮೂಗಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೊರೆಯಿಂದ ಇದು ಗಂಟಲಿಗೂ ಮತ್ತು ಧ್ವನಿನಾಳಕ್ಕೂ ಹಬ್ಬು ವುದು. ಧ್ವನಿನಾಳಕ್ಕೆ ಹಬ್ಬಿದಲ್ಲಿ ಧ್ವನಿ ಬದಲಾಯಿಸುತ್ತದೆ. ಅತ್ತರೆ ಅಥವಾ ಮಾತನಾಡಿದರೆ ಶಬ್ದವೇ ಇರುವುದಿಲ್ಲ. ಅಂಥಹ ಸಂದರ್ಭದಲ್ಲಿ ಉಸಿರಾಡಲು ಕಷ್ಟ ಆಗುವುದು.

ಮೂಗಿನಲ್ಲಿ ಬರುವ ಡಿಫ್ತೀರಿಯಾ ಕಾಯಿಲೆ ಬಹಳ ಸೋಂಕಿನ ಕಾಯಿಲೆ. ಆಗ ಗಂಟಲು ನೋವು ಉಂಟಾಗುತ್ತದೆ. ಇದನ್ನು "ಡಿಫ್ತೀರಿಯಾ" ಅಥವಾ "ಕಂಠರೋಗ" ಎಂದು ಕರೆಯುವರು.

ಹಳ್ಳಿಯ ಹಿರಿಯ ಮಹಿಳೆ ಸರಸಮ್ಮ. ಓದು, ಬರಹ ಬಲ್ಲವಳು. ಸಂಸಾರದ ಸಾವು-ನೋವು ಅರಿತವಳು. ಇದ್ದೊಬ್ಬ ಮಗನನ್ನು ಈ ರೋಗ ಬಲಿ ತೆಗೆದುಕೊಂಡಿತ್ತು. ಆ ನೆನಪು ಮರುಕಳಿಸಿತು. ಕೂಡಲೇ ಕಣ್ಣಲ್ಲಿ ನೀರು ಬಂದಿತು. ಆದರೂ ಕೇಳುವ ಹಂಬಲ.

ವೈದ್ಯರೇ, ಹಿಂದೆ ನಮ್ಮ ಮಗುವಿಗೆ ಹೀಗಾಗಿತ್ತು. ಆಗ ನಮಗೇನೂ ತಿಳಿಯಲಿಲ್ಲ. ವೈದ್ಯರ ಹತ್ತಿರ ಹೋದರೂ ಮಗು ಉಳಿಯಲಿಲ್ಲ ಎಂದಳು.

ವೈದ್ಯರು—ನೀವು ಮಾಡುವುದು ಹೀಗೆಯೇ. ಮೊದಲು ಸುಮ್ಮನಿರುವಿರಿ. ಕಾಯಿಲೆ ಉಲ್ಬಣವಾದಾಗ ನಮ್ಮ ಬಳಿ ಓಡಿ ಬರುವಿರಿ. ಆಗಲೂ ನಾವು ಶಕ್ತಿ ಮೀರಿ ಸೇವೆ ಮಾಡುತ್ತೇವೆ.

ಕಾಳಮ್ಮ—ಕಾಯಿಲೆ ಬಂದಿದೆ ಎಂದು ಗುರುತಿಸುವುದು ಹೇಗೆ?

ವೈದ್ಯರು--ಮಗುವಿಗೆ ಮೊದಲು ತಲೆನೋವು ಬರುವುದು. ಮೈ. ಕೈ ನೋವುಂಟಾಗುವುದು. ಗಂಟಲಲ್ಲಿ ನೋವು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣುವುದು. ಜ್ವರವೂ ಬರಬಹುದು. ಮಗುವಿಗೆ ಆಹಾರ ರುಚಿಸದು. ಗಂಟಲಲ್ಲಿ ಪೊರೆ ಬೆಳೆದಿರುತ್ತದೆ. ಇದು ನೋಡಲು ನಸುಬೂದು ಬಣ್ಣವಿರುವುದು. ಬಾಯಿ ಕೆಟ್ಟವಾಸನೆ. ಕುತ್ತಿಗೆಯ ಸುತ್ತಲಿನ ಗ್ರಂಥಗಳು ದೊಡ್ಡವಾಗಬಹುದು. ವಾಂತಿ ಆಗುತ್ತದೆ. ಧ್ವನಿ ಬದಲಾಯಿಸುವುದು. ವಿಪರೀತ ಬಲಹೀನತೆ ಉಂಟಾಗುವುದು ಮಗು ಉಸಿರಾಡಲು ಚಡಪಡಿಸುತ್ತದೆ. ನಿದ್ದೆ ಮಾಡಲಾಗದು. ಕುಳಿತುಕೊಳ್ಳ ಬಯುಸದು. ತುಟಿ, ಬೆರಳಿನ ತುದಿಗಳು ನೀಲಿ ಬಣ್ಣ ಹೊಂದುವುವು. ಮಗುವಿಗೆ ಉಸಿರಾಟಕ್ಕೆ ತೊಂದರೆ ಆಗಿ ಮೈ ನೀಲಿ ಬಣ್ಣಕ್ಕೆ ಬಂದರೆ ಪ್ರಾಣಕ್ಕೇ ಅಪಾಯ. ಇಂತಹ ಸಂದರ್ಭದಲ್ಲಿ ಮಗುವಿನ ಪ್ರಾಣ ಉಳಿಸಲು ಆಪರೇಷನ್ ಅಗತ್ಯ.

ಪ್ರಶ್ನೆ : ಆಪರೇಷನ್ ಅಂದರೆ ಏನು ?

ಉತ್ತರ : ಕತ್ತಿನಲ್ಲಿ ಶ್ವಾಸನಾಳಕ್ಕೆ ಒಂದು ತೂತು ಮಾಡಿ ಅದರ ಮುಖಾಂತರ ಉಸಿರಾಡಲು ಸಹಾಯ ಮಾಡುವುದು. ಇದರಿಂದ ಪ್ರಾಣ ಉಳಿಯುವುದು. ಪ್ರಾಣಕ್ಕೇನೂ ಅಪಾಯ ಇಲ್ಲ. ಮಗು ಪ್ರಾಣಾಪಾಯದಿಂದ ಪಾರಾದನಂತರ ಆ ತೂತನ್ನು ಮುಚ್ಚಬಹುದು. ಆಗ ಮಗು ಎಂದಿನಂತೆ ಮೂಗಿನಿಂದ ಉಸಿರಾಡಬಹುದು.

ಜನರು ವೈದ್ಯರ ಹೇಳಿಕೆಯನ್ನು ಆಸಕ್ತಿಯಿಂದ ಕೇಳುತ್ತಿದ್ದರು.

ಬಾಳಮ್ಮ—ಇದು ಗಂಟಲಲ್ಲಿ ಮಾತ್ರ ಬರುವುದೇ ?

ವೈದ್ಯರು—ಇಲ್ಲ. ಇದು ಕೇವಲ ಗಂಟಲ ರೋಗವಲ್ಲ. ಮೂಗು, ಕಣ್ಣುಗಳನ್ನೂ ಇದು ಬಿಟ್ಟಿಲ್ಲ. ಕಣ್ಣಿಗೆ ಬಂದಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ರೆಪ್ಪೆಗಳು ಊದಿಕೊಳ್ಳುವುವು. ಪಿಸಿರು ಕಟ್ಟುವುದು. ಕಣ್ಣು ನೋಯುವುದು. ಕೆಲವು ಸಲ ದೂರದ ನೋಟ ನಾಶವಾಗುವುದು. ಮೂತ್ರದಲ್ಲಿ ದೋಷ ಕಂಡುಬರುತ್ತದೆ. ಎಚ್ಚರ ತಪ್ಪುವುದು. ಈ ಕಾಯಿಲೆ ಮೂಲತಃ ಮೂಗಿನಲ್ಲಿ ಬರಬಹುದು. ಗಂಟಲು ಮತ್ತು ಧ್ವನಿನಾಳದಲ್ಲೂ ಬರುತ್ತದೆ.

ರಾಜಣ್ಣ—ಇದಕ್ಕೆ ಉಪಾಯ ಇಲ್ಲವೆ? ತಡೆಗಟ್ಟುವ ಬಗೆ ಹೇಗೆ?

ವೈದ್ಯರು—ಇದೆ. ಈ ರೋಗ ಬರದಂತೆ ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದನ್ನು ಕೊಡಿಸಬೇಕು. ರೋಗ ತಗುಲಿದಾಗ ಪೂರ್ಣ ವಿಶ್ರಾಂತಿ ಅಗತ್ಯ. ಹಾಸಿಗೆ ಬಿಟ್ಟು ಓಡಾಡದಂತೆ ನೋಡಿಕೊಳ್ಳಬೇಕು. ಬೇರೆ ಮಕ್ಕಳನ್ನು ಇವರಿಂದ ದೂರ ಇಡಬೇಕು. ಮೊದಲೇ ಹೇಳಿದಂತೆ ಇದು ಒಂದು ಅಂಟುರೋಗ. ಒಬ್ಬರಿಂದ ಒಬ್ಬರಿಗೆ ಹರಡುವುದು. ರೋಗಿಗೆ ಬಳಸುವ ತಟ್ಟೆ, ಲೋಟ, ವಸ್ತ್ರಗಳನ್ನು ಬಿಸಿ ನೀರಿನಿಂದ ಇಲ್ಲವೆ ಕ್ರಿಮಿನಾಶಕದಿಂದ ತೊಳೆಯಬೇಕು. ರೋಗದ ಲಕ್ಷಣ ಕಂಡಕೂಡಲೇ ಆಸ್ಪತ್ರೆಗೆ ಸೇರಿಸುವುದು ಒಳ್ಳೆಯದು. ಇಲ್ಲವಾದಲ್ಲಿ ಮಗುವಿನ ಜೀವಕ್ಕೇ ಅಪಾಯ.

ರೋಗಿಯ ಗಂಟಲು ಕಟ್ಟಿರುವುದು. ಆದುದರಿಂದ ಕೊಡುವ ಆಹಾರ ದ್ರವರೂಪದಲ್ಲಿರಬೇಕು. ನುಂಗಲಾಗದಿದ್ದಲ್ಲಿ ಕೊಳವೆಯ ಮೂಲಕ ಕೊಡಬಹುದು. ಆದರೆ ಅದು ನಿಮಗೆ ತಿಳಿಯದು. ಕಾರಣ ಆಸ್ಪತ್ರೆಗೆ ಸೇರಿಸುವುದೇ ಮೇಲು.

ಮೇಲಿನ ಎಲ್ಲಾ ನಿಯಮಗಳನ್ನು ಗಮನವಿಡಬೇಕು. ಈ ರೋಗವನ್ನು ಸುಲಭವಾಗಿ ತಡೆಗಟ್ಟಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದ್ಯರ ತಿಳುವಳಿಕೆಯ ಮಾತುಗಳು ಜನರ ಮನದಲ್ಲಿ ಮೂಡಿದವು. ಸಭಿಕರ ಕುತೂಹಲ ಕೆರಳಿಸಿತು. ವೈದ್ಯರು ಗಂಟೆ ನೋಡಿದರು. ಸಮಯವಾಗಿದೆ ಮುಂದಿನ ತಿಂಗಳು ಉಳಿದ ಕಾಯಿಲೆ ಬಗ್ಗೆ ತಿಳಿಸುವುದಾಗಿ ಹೇಳಿ ಕುಳಿತರು.

ಸರಪಂಚ—ಸಭಿಕರಲ್ಲಿ ನನ್ನ ವಿನಂತಿ. ಮುಂದಿನ ತಿಂಗಳು ಮಕ್ಕಳ ಪ್ರದರ್ಶನವನ್ನು ಗ್ರಾಮಪಂಚಾಯಿತಿಯವರು ಏರ್ಪಡಿಸುತ್ತಾರೆ. ಆರೋಗ್ಯವಂತ ಮಕ್ಕಳಿಗೆ ಬಹುಮಾನ ಕೊಡುವರು. ಭಾಗವಹಿಸುವ ಮಕ್ಕಳ ವಯಸ್ಸು ೧ರಿಂದ ೩ ವರ್ಷ. ಉತ್ತಮ ಮಗುವಿನ ಜೊತೆಗೆ ಬೆಳೆಸಿದ ತಾಯಿಗೂ ಬಹುಮಾನ ಉಂಟು. ತಪ್ಪದೆ ಎಲ್ಲರೂ ಬರಬೇಕು. ಅಂದಿನ ಬಹುಮಾನ ವಿತರಣೆ ವೈದ್ಯರು ಮಾಡಬೇಕಾಗಿ ಕೋರುತ್ತೇನೆ.

ಸಭಿಕರು ಚಪ್ಪಾಳೆ ತಟ್ಟಿದರು.

ವೈದ್ಯರು ಸರಪಂಚರ ಮಾತಿಗೆ ಸಮ್ಮತಿಸಿದರು. ಮುಗುಳು ನಗೆ ಬೀರುತ್ತಾ ಕಾರು ಹತ್ತಿದರು.

ಧನುರ್ವಾಯು (ಬಿಲ್ಲುರೋಗ)

ಮಾದ ಮಾಮೂಲಿನಂತೆ ಒಂದು ದಿನ ಮೊದಲೇ ಹಳ್ಳಿಗಳಲ್ಲಿ ಸುದ್ದಿ ಸಾರಿದ. ಜನರು ಮಕ್ಕಳೊಂದಿಗೆ ಚಾವಡಿಗೆ ಬಂದರು. ಅಂದು ಚಾವಡಿಯನ್ನು ತಳಿರುತೋರಣಗಳಿಂದ ಸಿಂಗರಿಸಿದ್ದರು. ಮಕ್ಕಳಿಗೆ ಬಗೆಬಗೆಯ ಉಡುಪು ತೊಡಿಸಿದ್ದರು

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯಿತಂದೆಯರೂ ಇದಕ್ಕೆ ಹೊರತಾಗಿರಲಿಲ್ಲ. ಮಕ್ಕಳ ಅಂದ, ಚೆಂದ ಕಣ್ಣಿಗೆ ಹಬ್ಬದಂತಿತ್ತು. ಎಲ್ಲರ ನೋಟ ಮಕ್ಕಳ ಕಡೆಗೆ. ಹಾಲುಗಲ್ಲದ ಹಸುಳೆಗಳ ಮುಗುಳುನಗೆ ಮನಸೆಳೆಯುವಂತಿತ್ತು.

ಬರ್ರನೆ ಕಾರು ಬಂದಿತು. ವೈದ್ಯರು ಕಾರಿನಿಂದ ಇಳಿದರು. ಸರಪಂಚರೂ ಸದಸ್ಯರೂ ಸ್ವಾಗತಿಸಿದರು. ಅಂದಿನ ಮಕ್ಕಳ ಅಂದ-ಚೆಂದ ಮನಕಾನಂದ ತರುವಂತಿತ್ತು. ವೈದ್ಯರು ಮಕ್ಕಳ ಗಲ್ಲ ತಟ್ಟುತ್ತಾ ಮುಂದೆ ಸಾಗಿದರು. ಪ್ರತಿ ಮಗುವಿನ ಆರೋಗ್ಯ ಪರೀಕ್ಷಿಸಿದರು.

ವೈದ್ಯರು ಮುಗುಳುನಗುವುದು. ಮಕ್ಕಳ ಜೊತೆ ಸರಸ ವಾಡುವುದು. ಸವಿಮಾತುಗಳಿಂದ ಪ್ರಶ್ನೆ ಕೇಳುವುದು. ಅವರು ತಪಾಸನೆ ಮಾಡಿದ ರೀತಿ ಎಲ್ಲರ ಮನ ಮೆಚ್ಚುವಂತಿತ್ತು.

ವೈದ್ಯರು ಉತ್ತಮ ಆರೋಗ್ಯವಂತ ಮಕ್ಕಳನ್ನು ಆರಿಸಿ ದರು. ಪಂಚಾಯಿತಿಯ ಅಭಿಲಾಷೆಯಂತೆ ಬಹುಮಾನ ವಿನಿಯೋಗ ಮಾಡಿದರು.

ಮಕ್ಕಳಿಗೆ ಕೊನೆಯ ತಿಂಗಳ ಚುಚ್ಚುಮದ್ದು ಕೊಟ್ಟರು. ಕೆಲವು ಮಕ್ಕಳಿಗೆ ಔಷಧಿ ನೀಡಿದರು.

ಕಮಲಮ್ಮ ಎಲ್ಲರಿಗೂ ಬೇಕಾದ ಮಹಿಳೆ. ಪಂಚಾಯ್ತಿಯ ಸದಸ್ಯೆ. ಮೂರು ಮಕ್ಕಳ ತಾಯಿ. ಕುಟುಂಬ ಯೋಜನೆ ಪಾಲಿಸಿದವಳು. ಮಕ್ಕಳನ್ನು ಆರೋಗ್ಯವಾಗಿಡಬೇಕೆಂಬುದೇ ಅವಳ ಆಸೆ. ರೋಗಗಳ ವಿಚಾರ ತಿಳಿಯುವಿಕೆ ಎಂದರೆ ಕುತೂಹಲ.

ಕಮಲಮ್ಮ—ವೈದ್ಯರೇ, "ಧನುರ್ವಾಯು" ರೋಗದ ವಿವರ ತಿಳಿಸಿರಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದ್ಯರು—ಆಗಲಿ, ಎರಡು ಕಾಯಿಲೆಗಳನ್ನು ಈಗಾಗಲೇ ವಿವರಿಸಿದ್ದೇನೆ. ಇದನ್ನು ತಿಳಿಸದೆ ಇರುತ್ತೇನೆಯೇ! ಎಂದು ಮುಂದುವರಿಸಿದರು.

ಧನುರ್ವಾಯು ರೋಗದಿಂದ ನರಳುತ್ತಿರುವ ಮಗು

ಇದೂ ಸಹಾ ಮಕ್ಕಳನ್ನು ಕಾಡುವ ಅಂಟುರೋಗ. ಈ ರೋಗ ಧನುರ್ವಾಯುವಿನ ರೋಗಾಣುಗಳಿಂದ ಹರಡುತ್ತದೆ ಈ ರೋಗಾಣುಗಳು ಸಲಾಕೆಯಂತೆ ನೆಟ್ಟಗಿರುತ್ತವೆ. ಕೊನೆಯಲ್ಲಿ ರೋಗಾಣುವನ್ನು ಹೊಂದಿರುವುವು. ಕಣ್ಣಿಗೆ ಕಾಣಿಸವು. ಸೂಕ್ಷ್ಮದರ್ಶಕ ಯಂತ್ರದಿಂದ ಮಾತ್ರ ನೋಡಲು ಸಾಧ್ಯ. ಗೊಬ್ಬರ, ಧೂಳು, ಸಗಣಿ ಇವುಗಳೇ ಅದರ ವಾಸಸ್ಥಾನ. ಇವು ಚಟುವಟಿಕೆ ಇಲ್ಲದೆ ಇರುತ್ತವೆ. ಸಮಯ ದೊರೆತಾಗ ಅಭಿವೃದ್ಧಿ ಹೊಂದುವುವು. ಗಾಯವು ಎಷ್ಟೇ ಚಿಕ್ಕದಿದ್ದರೂ ರೋಗಾಣು ದೇಹ ಸೇರಬಲ್ಲವು.

ಗಾಯುಗಳಲ್ಲಿ ಬಹು ವಿಧ— ಕ[illegible]ತು[illegible]ಯು, ಹರಿದಗಾಯು, ಗೀಟುಗಾಯು. ಇವುಗಳನ್ನು ಶು[illegible]ಯಾಗಿ[illegible]ಬೇಕು. ಇಲ್ಲದಿದ್ದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಯದ ಮೂಲಕ ರೋಗಾಣುಗಳು ದೇಹವನ್ನು ಸೇರಬಲ್ಲವು.

ಮಕ್ಕಳು ಆಡುವಾಗ ಎಡವಿ ಬೀಳುವರು. ಕೈ-ಕಾಲುಗಳಿಗೆ ಏಟು ಬೀಳುವುದು. ಗಾಯ ಆಗುವುದು. ರಕ್ತ ಬರುವುದು. ಆಗ ನೀವು ಏನು ಮಾಡುವಿರಿ?

ಕುಳಿತಿದ್ದವರು—ಮಣ್ಣು ಹಾಕುತ್ತೇವೆ.

ವೈದ್ಯರು—ಅದೇ ನೀವು ಮಾಡುವ ತಪ್ಪು. ಹಾಗೆ ಖಂಡಿತ ಮಾಡಬಾರದು. ಮಣ್ಣಿನಲ್ಲಿ ಕಣ್ಣಿಗೆ ಕಾಣದ ರೋಗಾಣುಗಳು ಇರುತ್ತವೆ. ಅವು ಮಣ್ಣಿನ ಮೂಲಕ ದೇಹದ ಒಳಗಡೆ ಸೇರುವುವು. "ಧನುರ್ವಾಯು" ರೋಗ ಉಂಟು ಮಾಡುವುವು. ಈ ರೋಗದಿಂದ ದೇಹವು ಹಿಂದಕ್ಕೆ ಬಿಲ್ಲಿನಂತೆ ಬಾಗುವುದು. ಅದಕ್ಕಾಗಿ ಇದನ್ನು "ಬಿಲ್ಲುರೋಗ" ಎಂದೂ ಕರೆಯುವರು. ಈ ರೋಗ ಯಾವ ವಯಸ್ಸಿನವರನ್ನೂ ಬಿಡದು.

ಕಾಳಮ್ಮ—ಈ ರೋಗವನ್ನು ಗುರುತಿಸುವುದು ಹೇಗೆ? ಇದರ ಲಕ್ಷಣಗಳೇನು?

ವೈದ್ಯರು-೨ ರಿಂದ ೧೦ ದಿನಗಳ ನಂತರ ಗಾಯಗೊಂಡವನು ಸುಮ್ಮನಿರಲಾರನು. ಏನೋ ಆಗಿದೆ ಎಂದು ಭಯಪಡುವನು. ಗಾಬರಿಗೊಳ್ಳದಿರನು. ತಲೆನೋವು ಬರುವುದು. ಕುತ್ತಿಗೆ ಬಿಗಿಯುವುದು. ಚಳಿ ಆಗುವುದು. ದವಡೆ ಬಿಗಿಯುವುದು. ಬಾಯಿ ತೆಗೆಯುವುದಕ್ಕೆ ಆಗುವುದಿಲ್ಲ. ಬೀಗ ಹಾಕಿದಂತಾಗುವುದು. ಮುಖ, ಕೈಕಾಲು, ದೇಹದ ಮಾಂಸಖಂಡಗಳು ಬಿಗಿಯುವುವು. ಬೆಳಕೆಂದರೆ ಆಗದು. ಕೀಲುಗಳಲ್ಲಿ ನೋವು. ಕೆಲವು ಸಲ ಉಸಿರಾಡಲು ತೊಂದರೆ. ಬಲಹೀನತೆ ಉಂಟಾಗುವುದು. ಮೂತ್ರ ಕಟ್ಟುವುದು. ಜ್ವರವೂ ಬರುವುದುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಯಗೊಂಡ ೫ ದಿನಗಳ ನಂತರ ಮೇಲಿನ ಗುರುತುಗಳು ಕಾಣಿಸುವುವು. ಕೆಲವರಿಗೆ ಗುರುತು ಕಾಣಿಸಲು ೨ ರಿಂದ ೭ ವಾರ ಗಳು ಬೇಕು.

ಶಿಶು ಹುಟ್ಟಿದಾಗ ಹೊಕ್ಕಳು ಬಳ್ಳಿಯನ್ನು ಕತ್ತರಿಸು ವಿರಲ್ಲವೆ ?



ವೈದ್ಯರು ರೋಗಗಳ ಬಗ್ಗೆ ತಿಳಿಸುತ್ತಿರುವುದು

ಕುಳಿತವರು—ಹೌದು ಹೌದು ಎಂದರು.

ವೈದ್ಯರು—ಆಗ ನೀವು ಎಚ್ಚರ ವಹಿಸಬೇಕು. ಇಲ್ಲ ದಿದ್ದಲ್ಲಿ ರೋಗಾಣುಗಳು ಶಿಶುವಿನ ದೇಹವನ್ನು ಸೇರಬಲ್ಲವು. ಹೀಗೂ ರೋಗ ಉಂಟಾಗುವುದು. ಈ ರೋಗ ಬಂದಲ್ಲಿ ಬದುಕು ವುದು ಕಷ್ಟ. ಹೆರಿಗೆ ಆಗುವಾಗ ಕೆಲವು ಸಲ ಗಾಯ ಆಗುವುದು. ಆಗ ಉಪಯೋಗಿಸುವ ಬಟ್ಟೆ ಕೊಳಕಿರಬಾರದು. ಹಾಗಿದ್ದಲ್ಲಿ ಈ ರೋಗಾಣುಗಳು ಬಟ್ಟೆಯ ಮುಖಾಂತರ ತಾಯಿಯ ದೇಹ ವನ್ನು ಸೇರುವುವು. ರೋಗ ಉಂಟುಮಾಡುವುವು. ಕಾರಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆರಿಗೆ ಸಮಯದಲ್ಲಿ ಎಚ್ಚರವಿರಬೇಕು. ಅಂಗಾಂಗಗಳ ಮಡುವಿಕೆಯಿಂದಲೂ ಈ ರೋಗ ಬರುವುದು. ಈ ರೋಗ ಮಕ್ಕಳಿಗೆ ಮಾತ್ರವೇ ಅಲ್ಲ. ಯಾರಿಗೆ ಯಾವ ವಯಸ್ಸಿನಲ್ಲಿ ಬೇಕಾದರೂ ಬರಬಹುದು. ಯಾರಿಗೆ ಯಾವ ವಿಧವಾದ ಗಾಯ ಆದಲ್ಲಿ ರೋಗ ನಿರೋಧಕ ಚುಚ್ಚು ಮದ್ದು ತೆಗೆದುಕೊಳ್ಳ ಬೇಕು.

ಸರಸಮ್ಮ—ರೋಗ ಬರದಂತೆ ತಡೆಗಟ್ಟುವುದು ಹೇಗೆ?

ವೈದ್ಯರು—ಇದು ತಿಳಿಯಬೇಕಾದ ಮುಖ್ಯ ವಿಷಯ. ನಾನು ಹೇಳಿದ ಲಕ್ಷಣಗಳು ಕಂಡಕೂಡಲೇ ವೈದ್ಯರ ಸಲಹೆ ಪಡೆಯಬೇಕು. ತಾತ್ಸಾರ ಮಾಡಬಾರದು. ಆದ ಗಾಯವನ್ನು ಕ್ರಿಮಿನಾಶಕದಿಂದ ತೊಳೆಯಬೇಕು. ಗಾಯದ ಮೇಲೆ ಶುದ್ಧ ಬಟ್ಟೆ ಕಟ್ಟಬೇಕು. ಕೂಡಲೇ ವೈದ್ಯರ ಬಳಿ ಕಳಿಸಬೇಕು. ಮನೆಗಿಂತ ಆಸ್ಪತ್ರೆಯೇ ಮೇಲು. ಮಕ್ಕಳಿಗೆ ಚುಚ್ಚು ಮದ್ದು, ಔಷಧಿ ಕೊಡಿಸಬೇಕು. ಮೇಲಿನ ವಿಷಯಗಳನ್ನು ಗಮನ ವಿಟ್ಟಲ್ಲಿ ರೋಗ ಬರದಂತೆ ತಡೆಗಟ್ಟಬಹುದು.

ಮಕ್ಕಳ ಮಾರಕ ರೋಗಗಳಾದ ನಾಯಿಕೆಮ್ಮು, ಡಿಫ್ತೀರಿಯಾ, ಧನುರ್ವಾಯುಗಳ ಬಗ್ಗೆ ಉದಾಸೀನ ಕೂಡದು.

ಈ ಮೂರು ರೋಗಗಳೂ ಬಾರದಂತೆ ನಿಮ್ಮ ಮಕ್ಕಳಿಗೆ ಚುಚ್ಚುಮದ್ದು ಔಷಧಿ ಕೊಟ್ಟಿದ್ದೇನೆ. ತೆಗೆದುಕೊಳ್ಳದ ಮಕ್ಕಳಿದ್ದರೆ ಕೂಡಲೇ ಆಸ್ಪತ್ರೆಗೆ ಕಳಿಸಿರಿ.

ನೀವು ಈ ಕೆಳಗಿನ ವಿಷಯಗಳನ್ನು ನೆನಪಿನಲ್ಲಿ ಇಡಬೇಕು:

Sri Vidyabharathi Book Centre, Sringeri

CC-O. In Public Domain. Digitized by eGangotri

೧. ಆರೋಗ್ಯ ಉಳ್ಳ ಮಗ ವಿಗೆ ೩ ತಿಂಗಳ ಒಳಗೆ ದೇವಿ ಹಾಕಿಸಬೇಕು.

೨. ೪ ರಿಂದ ೬ ತಿಂಗಳ ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದು ಹಾಕಿಸಬೇಕು.

(ಇದಕ್ಕೆ ಟ್ರಿಪಲ್ ಆಂಟಿಜೆನ್ ಎಂದು ಹೆಸರು)

೩. ಇದು ನಾಯಿಕೆಮ್ಮು, ಡಿಫ್ತೀರಿಯಾ, ಧನುರ್ವಾಯು ರೋಗಗಳನ್ನು ತಡೆಗಟ್ಟುವುದು.

೪. ಜೊತೆಗೆ ಪೋಲಿಯೋ ಹನಿ ಕೊಡಿಸಬೇಕು.

ಮೇಲೆ ಹೇಳಿದ ಚುಚ್ಚುಮದ್ದು ಮತ್ತು ಪೋಲಿಯೋ ಹನಿಯನ್ನು ತಿಂಗಳಿಗೆ ಒಂದು ಸಲದಂತೆ ಮೂರು ತಿಂಗಳು ಬಿಡದೆ ಹಾಕಿಸಬೇಕು.

೫. ಸೋಂಕು ತಲೆದೋರಿದಾಗ ಪುನಃ ಚುಚ್ಚುಮದ್ದು ಹಾಕಿಸಬೇಕು.

೬. ಮಕ್ಕಳಿಗೆ ಒಂದು ವರ್ಷದ ಒಳಗೆ ಬಿ. ಸಿ. ಜಿ. ಚುಚ್ಚುಮದ್ದು ಹಾಕಿಸಬೇಕು.

೭. ಯಾವ ರೋಗವೇ ಬಂದಿರಲಿ, ಕೂಡಲೇ ವೈದ್ಯರಿಗೆ ತೋರಿಸಬೇಕು. ಮಕ್ಕಳಿಗೆ ೨ ವರ್ಷಕ್ಕೆ ಇನ್ನೊಂದು ಚುಚ್ಚು ಮದ್ದು ಹಾಕಿಸಬೇಕು ಮತ್ತು ೫ ವರ್ಷಕ್ಕೆ ಒಂದು ಹಾಕಿಸ ಬೇಕು. ಇದಕ್ಕೆ ಬೂಸ್ಟರ್ ಡೋಸ್ ಅನ್ನುತ್ತೇವೆ.

ಮೇಲಿನ ಅಂಶಗಳ ಕಡೆ ಗಮನವಿಟ್ಟಲ್ಲಿ ಸುಲಭವಾಗಿ ರೋಗಗಳನ್ನು ತಡೆಗಟ್ಟಬಹುದು. "ರೋಗಗಳ ಬಗ್ಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳುವಳಿಕೆ ಎಲ್ಲರಿಗೂ ಅಗತ್ಯ. ಎಲ್ಲರೂ ಚೆನ್ನಾಗಿ ಬಾಳಿ ಬದುಕಬೇಕು. ಮಕ್ಕಳು ದೇವರು ಕೊಟ್ಟ ವರ. ಉದಾಸೀನ ಕೂಡದು. ವೈದ್ಯರ ಸಲಹೆ ಪಡೆಯಿರಿ. ಮಕ್ಕಳ ರಕ್ಷಣೆ ಮಾಡಿರಿ."

"ಮಕ್ಕಳ ಭಾಗ್ಯ ಎಲ್ಲರಿಗೂ ಸಿಗದು. ಪಾಲಕರು ಮಕ್ಕಳ ಆರೋಗ್ಯ ಭಾಗ್ಯದ ಕಡೆ ಗಮನವಿಡಬೇಕು. ರೋಗಗಳ ಬಗ್ಗೆ ಎಚ್ಚರವಿರಬೇಕು" ಎಂದು ತಿಳುವಳಿಕೆ ನೀಡಿದರು.

ಸರಪಂಚ—ಸ್ವಾಮೀ, ತಮ್ಮಿಂದ ಬಹಳ ಉಪಕಾರ ವಾಯಿತು. ಮಕ್ಕಳಿಗೆ ಬರುವ ರೋಗಗಳ ಲಕ್ಷಣ ತಿಳಿಯಿತು. ತಾವು ಆಗಾಗ ನಮ್ಮಲ್ಲಿಗೆ ಬರುತ್ತಿರಬೇಕು.

ತಾವು ತಿಳಿಸಿದ ಮಾಹಿತಿಯಿಂದ ನಮ್ಮ ಕಣ್ಣು ತೆರೆಯಿತು. ನಿಮಗೆ ನಮ್ಮ ವಂದನೆಗಳು.

———

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಲೆ: ರೂ. ೧-೦೦

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು
ಪ್ರತಿಗಳು ೧೦,೦೦೦—೧೯೮೮

Sri Vidyabharathi Book Centre, Sringeri